ಆಸ್ಪತ್ರೆ ಪ್ರಾರಂಭವಾಗಿ ಸುಮಾರು 7-8 ವರ್ಷಗಳು ಕಳೆದರೂ ಕೂಡ ಇದಕ್ಕೆ ಸೂಕ್ತವಾದ ಕಟ್ಟಡ ಇಲ್ಲದೇ ಇರತಕ್ಕಂತಾದ್ದು ಮತ್ತು ಇದರಿಂದ ಸಾರ್ವಜನಿಕರಿಗೆ ಬಹಳ ಸಮಸ್ಯೆ ಉಂಟಾಗಿದೆ. ತಮಗೆ ಗೊತ್ತಿರುವ ಹಾಗೆ ಆಯುರ್ವೇದಕ್ಕೆ ಪ್ರಸ್ತುತ ದಿನಗಳಲ್ಲಿ ಜನ ಮೊರೆ ಹೋಗುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿ ಅವರೇನು ಸರ್ವೆ ನಂ.77ರಲ್ಲಿ 15 ಗುಂಟೆ ಜಮೀನನ್ನು ತೆಗೆದುಕೊಂಡಿದ್ದೇವೆಂದು ಉತ್ತರದಲ್ಲಿ ತಿಳಿಸುತ್ತಿದ್ದಾರೆ, ಅದು ನಗರಕ್ಕೆ ಬಹಳ ದೂರವಾಗಿರತಕ್ಕ ನಿವೇಶನ. ನಾನಾದರೂ ಕೂಡ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನಮ್ಮ ನಗರದ ಮಧ್ಯ ಭಾಗದಲ್ಲಿರತಕ್ಕ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಾಗಲೀ ಅಥವಾ ಜಿಲ್ಲಾ ಆರೋಗ್ಯ ಅಧಿಕಾರಿಗಳ ಕಛೇರಿ ಇರತಕ್ಕ ಆವರಣದಲ್ಲಿ ಒಂದು ಟ್ರೈನಿಂಗ್ ಸೆಂಟರ್ ಕಟ್ಟಡ ನಿರುಪಯೋಗವಾಗಿ ಇದ್ದು, ಅದನ್ನು ಸೂಕ್ತವಾಗಿ ರಿಪೇರಿ ಮಾಡಿದರೆ ಈ ಒಂದು ಆಸ್ಪತ್ರೆಯನ್ನು ಅಲ್ಲಿಗೆ ಸ್ಥಳಾಂತರಿಸಬಹುದು ಎಂಬ ಅಭಿಪ್ರಾಯ ಇದೆ. ಈ ಒಂದು ದಿಸೆಯಲ್ಲಿ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ ಎಂಬುದನ್ನು ಹೇಳಬೇಕು. ಹಾಗೆಯೇ ಈ ಜಿಲ್ಲಾ ಆಯುರ್ವೇದ ಆಸ್ಪತ್ರೆಗೆ, ಇತರ ಆಸ್ಪತ್ರೆಗಳಲ್ಲಿರುವ ಹಾಗೆ ಸಂದರ್ಶಕರ ಸಮಿತಿಯನ್ನು ರಚಿಸುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆಯೇ ಎಂಬುದನ್ನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ.

ಡಾ॥ ಎ.ಬಿ.ಮಾಲಕರೆಡ್ಡಿ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ನಾನು ಆ ಸ್ಥಳವನ್ನು ಪರೀಕ್ಷೆ ಮಾಡುತ್ತೇನೆ. ಟ್ರೈನಿಂಗ್ ಸೆಂಟರ್ ಖಾಲಿ ಇದೆ ಎಂದು ಹೇಳಿದ್ದಾರೆ. ಆ ಕಟ್ಟಡದ ಸ್ಥಳ ಪರೀಕ್ಷೆ ಮಾಡಿ, ಸೂಕ್ತವೆಂದು ಕಂಡರೆ ಅದನ್ನು ಸುಧಾರಣೆ ಮಾಡಿ ಆಯರ್ವೇದ ಆಸ್ಪತ್ರೆಯನ್ನು ಸ್ಥಳಾಂತರ ಮಾಡುತ್ತೇವೆ.

ಶ್ರೀ ಎಂ.ಎಸ್.ಆತ್ಮಾನಂದ: ಈ ಆಯುರ್ವೇದ ಆಸ್ಪತ್ರೆಗೆ ಸಂದರ್ಶಕರ ಸಮಿತಿಯನ್ನು ರಚಿಸುವುದಕ್ಕೆ ಸರ್ಕಾರ ಅನುವು ಮಾಡಿಕೊಡುತ್ತದೆಯೇ? ಬೋರ್ಡ್ ಆಫ್ ವಿಸಿಟರ್ಸ್ ಕಮಿಟಿಯನ್ನು ರಚನೆ ಮಾಡುತ್ತದೆಯೇ?

ಡಾ॥ ಎ.ಬಿ.ಮಾಲಕರೆಡ್ಡಿ: ಪರಿಶೀಲನೆ ಮಾಡುತ್ತೇನೆ.

ಪ್ರಶ್ನೆ ಸಂ.2397 ಮತ್ತು 2603

ಅಧ್ಯಕ್ಷರು: ಮಿಸ್ಟರ್ ನಾಯ್ಡುರವರೇ, ತಮ್ಮ ಪ್ರಶ್ನೆಯನ್ನು ಡಿ.ಹಿ.ಎ.ಆರ್. ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಹೇಳಿದ್ದಾರೆ. ಒಂದು ವಾರ ತಡೆಯಿರಿ, ಆಮೇಲೆ ಉತ್ತರ ಬರುತ್ತದೆ.

ಹಾಗೆಯೇ ಮಾನ್ಯ ಜಗದೀಶ್ ಶೆಟ್ಟರ್ ಅವರ ಪ್ರಶ್ನೆಗೆ ಟೈಮ್ ಕೇಳಿದ್ದಾರೆ. 5550 ಪಂಚಾಯ್ತಿಗಳಲ್ಲಿ ಎಷ್ಟು ಅನುದಾನ ಕೊಡಲಾಗಿದೆ ಎಂದು ಕೇಳಿದ್ದೀರಲ್ಲಾ, ಇದಕ್ಕೆ ಕಾಲಾವಕಾಶ ಕೇಳಿದ್ದಾರೆ.

**ವಿಷಯ: ಜಿಜಿಜಿಂ ಪಂಚಾಯ್ತಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ.**

ಶ್ರೀ ಜಗದೀಶ್ ಶೆಟ್ಟರ್: ನಾನು ಇದನ್ನು ಹದಿನೈದು ದಿವಸ ಮುಂಚೆಯೇ ಕಳುಹಿಸಿ ಕೊಟ್ಟಿದ್ದೇನೆ. ಬಹಳ ಸದಸ್ಯರ ಪ್ರಶ್ನೆಗಳು ಇದೇ ರೀತಿ ಆಗುತ್ತಿದೆ. ಅಂದರೆ, ಬಹಳ ಮಹತ್ವದ ಪ್ರಶ್ನೆಗಳು ಇರುತ್ತವೆ. ತಮ್ಮ ಮುಂದೆ ಒಂದು ವಿಷಯವನ್ನು ಪ್ರಸ್ತಾಪ ಮಾಡುವಂಥಾದ್ದು, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಈಗಾಗಲೇ ಕಂಪ್ಯೂಟರೈಸೇಷನ್, ಅಂಕಿ ಸಂಖ್ಯೆ ಎಲ್ಲಾ ಆಗುತ್ತಿದೆ. ಬಹಳ ಮಹತ್ವದ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಈ ಅಂಕಿ ಸಂಖ್ಯೆಗಳ ಕೊರತೆ ಆಗಬಾರದು. ಹಾಗಾದರೆ, ಈ ಕಂಪ್ಯೂಟರೈಸೇಷನ್ ಎಲ್ಲಾ ಏಕೆ ಬೇಕು? ಇವುಗಳನ್ನೆಲ್ಲಾ ತೆಗೆದುಬಿಡಿ, ರದ್ದು ಮಾಡಿ. ಮಾನ್ಯ ಮುಖ್ಯಮಂತ್ರಿಗಳೇ, ಇಲ್ಲಿ ನನ್ನದೊಂದು ಪ್ರಶ್ನೆ ಇದೆ. ಜಿಲ್ಲಾಮಟ್ಟದಿಂದ ಅಂಕಿ ಸಂಖ್ಯೆಗಳನ್ನು ತರಿಸುವಂಥಾದ್ದು, ಇವತ್ತು ಎಲ್ಲಾ ಕಡೆ ಗಣಕೀಕರಣ ಮಾಡುತ್ತಿದ್ದೀರಿ. ಹಾಗಾದರೆ, ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ನಮಗೆ ಬೇಕಾದ ಅಂಕಿ ಸಂಖ್ಯೆ ಸಿಗುವುದಿಲ್ಲವೆಂದರೆ, ಅಧಿವೇಶನ ಕರೆಯುವುದು ಏಕೆ? ಈ ಗಣಕೀಕರಣ ಇವೆಲ್ಲಾ ಏಕೆ? ಇವು ಯಾವುವೂ ಬೇಕಾಗಿಲ್ಲ. ನೀವು ಮತ್ತೆ 15 ದಿವಸ ಟೈಮ್ ತೆಗೆದುಕೊಂಡರೆ, ಅಷ್ಟೊತ್ತಿಗೆ ಅಧಿವೇಶನವೇ ಮುಗಿದು ಹೋಗುತ್ತದೆ. ಇದು ಬಹಳ ಮಹತ್ವದ ಪ್ರಶ್ನೆ. ಇವತ್ತು ಗ್ರಾಮ ಪಂಚಾಯ್ತಿಗಳಿಗೆ ಹಣ ಸಿಗುತ್ತಾ ಇಲ್ಲ, ಅನುದಾನ ಹೋಗುತ್ತಾ ಇಲ್ಲ. ಒಂದೂವರೆ ವರ್ಷದಲ್ಲಿ ಬರೀ 50-60 ಸಾವಿರ ರೂಪಾಯಿಗಳು ಮಾತ್ರ ಸಿಗುತ್ತಾ ಇದೆ. ಒಂದು ಸಣ್ಣ ರಿಪೇರಿ ಮಾಡುವುದಕ್ಕೂ ಅಲ್ಲಿ ಹಣ ಇಲ್ಲ. ಸರ್ಕಾರ ಇದರ ಬಗ್ಗೆ ಗಂಭೀರವಾದ ಚಿಂತನೆ ಮಾಡಬೇಕಾಗಿದೆ.

ಅಧ್ಯಕ್ಷರು: ಮಾನ್ಯ ಫೋರ್ಪಡೆಯವರೇ, 15 ದಿವಸ ಕಾಲಾವಕಾಶ ಬೇಡಿ, ಮುಂದಿನ ವಾರದಲ್ಲಿ ಉತ್ತರ ತರಿಸಿ.

ಶ್ರೀ ಎಂ.ವೈ.ಫೋರ್ಪಡೆ: ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ 5600 ಗ್ರಾಮ ಪಂಚಾಯ್ತಿಗಳಿಗೆ ಎಷ್ಟು ಅನುದಾನ ಕೊಟ್ಟಿದ್ದೀರಿ, ಅದರಲ್ಲಿ ಎಷ್ಟು ಬಿಡುಗಡೆಯಾಗಿದೆ, ಎಷ್ಟು ಖರ್ಚಾಗಿದೆ ಎಂದು ಕೇಳಿದ್ದಾರೆ. 5600 ಪಂಚಾಯ್ತಿಗಳಿಂದ ಮಾಹಿತಿ ತರಿಸಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಅಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯ್ತಿಗಳಿಗೂ ಹೋಗಿ ಅಂಕಿ ಅಂಶ ತರುವುದಿಲ್ಲ. ಜಿಲ್ಲಾ ಪಂಚಾಯ್ತಿಗಳವರು, ಎಲ್ಲಾ ಗ್ರಾಮ ಪಂಚಾಯ್ತಿಗಳ ಮಾಹಿತಿಯನ್ನು ತರಿಸಿಟ್ಟುಕೊಳ್ಳಬೇಕು. ಗಣಕೀಕರಣ, ಮಾಹಿತಿ ತಂತ್ರಜ್ಞಾನ ಈ ವಿಚಾರಗಳನ್ನು ಸುಮ್ಮನೇ ಮಾತನಾಡಬೇಕಷ್ಟೆ.

ಅಧ್ಯಕ್ಷರು: ಆಯಿತು, ಒಂದು ವಾರದಲ್ಲಿ ಉತ್ತರ ತರಿಸಿ.

ಬೆಂಗಳೂರು ನಗರದ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆ

206(2028)

ಶ್ರೀ ಸುರೇಶ್ ಕುಮಾರ್ ಎಸ್.(ರಾಜಾಜಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲಾಗುತ್ತಿದೆ?

ಆ) ಮರಣೋತ್ತರ ಶವ ಪರೀಕ್ಷೆಗಾಗಿ ಬಂದಿರುವ ಶವಗಳನ್ನು ಸೂಕ್ತ ರೀತಿಯಿಂದ ಇಡಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೊಡಕುಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ನಫೀಸಾ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆ.

ಆ) ಈಗಾಗಲೇ ಹದಿನೈದು ಶವಗಳನ್ನು ಸೂಕ್ತ ರೀತಿಯಲ್ಲಿ ಶೈತ್ಯಾಗಾರದಲ್ಲಿ ಇಡಲು ಆಸ್ಪದವಿದ್ದು ಇನ್ನೂ ಹೆಚ್ಚಿನ ಶವಗಳನ್ನು ಶೈತ್ಯಾಗಾರದಲ್ಲಿ ಇಡಲು ಕಟ್ಟಡದ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ನೋಡಿದರೆ, the answer requires post-mortem. ನಾನು ಪೋಸ್ಟ್ ಮಾರ್ಟಮ್ ಸೆಂಟರ್ಸ್ ಬಗ್ಗೆ ಕೇಳಿದ್ದೇನೆ. ಬೆಂಗಳೂರು ನಗರದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲಾಗುತ್ತದೆ ಎಂದು ಕೇಳಿರುವುದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ. ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಮತ್ತು ವಿಕ್ಟೋರಿಯಾ